ಗುತ್ತಿಗೆದಾರರ ಮೇಲೆ ಕಾನೂನು ಕ್ರಮ ಜರುಗಿಸದಿರಲು ಕಾರಣವೇನು ; ತುರ್ತಾಗಿ ತಪ್ಪಿತಸ್ಥರ ಮೇಲೆ ಕ್ರಮವನ್ನು ಕೈಗೊಳ್ಳಲು ಸರ್ಕಾರವು ಗಮನಹರಿಸುವುದೇ ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಭದ್ರಾ ಯೋಜನೆಯ ನಾಲೆಗಳ ಆಧುನೀಕರಣದ ರೂ. 951.00 ಕೋಟಿ ಮೊತ್ತದ ಕಾಮಗಾರಿಗಳು ಒಟ್ಟು 33 ಪ್ಯಾಕೇಜುಗಳಲ್ಲಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಫೆಬ್ರವರಿ 2011ರ ಅಂತ್ಯಕ್ಕೆ ರೂ. 722.27 ಕೋಟಿ ಮೊತ್ತದ ಪ್ರಗತಿ ಸಾಧಿಸಲಾಗಿದೆ. ಆಧುನೀಕರಣ ಕಾಮಗಾರಿಗಳನ್ನು ಇಲಾಖೆಯ ಗುಣ ನಿಯಂತ್ರಣ ಹಾಗೂ ಮೂರನೇ ಏಜೆನ್ಸಿಯವರ ಪರಿವೀಕ್ಷಣೆಯಲ್ಲಿ ಅನುಷ್ಠಾನಗೊಳಿಸಲಾಗಿದೆ.

ಭದ್ರಾ ಆಧುನೀಕರಣ ಕಾಮಗಾರಿಯಲ್ಲಿ ಒಟ್ಟಾರೆಯಾಗಿ 3 ವರ್ಷಗಳಲ್ಲಿ ಮಾಡಲಾದ ಕಾಮಗಾರಿಗಳಲ್ಲಿ ಕೆಲವೊಂದು ಸರಪಳಿಗಳಲ್ಲಿ ನ್ಯೂನ್ಯತೆಗಳು ಕಂಡುಬಂದಿದ್ದು, ಈ ನ್ಯೂನ್ಯತೆಗಳನ್ನು ಗುತ್ತಿಗೆದಾರರುಗಳಿಂದಲೇ ಸಂಪೂರ್ಣವಾಗಿ ಸರಿಪಡಿಸಿಕೊಳ್ಳಲಾಗುವುದು. ಅಲ್ಲದೇ ಭಾರಿ ಮಳೆಯಿಂದಾಗಿ ನಾಲೆಗಳ ಮೇಲ್ಭಾಗದಿಂದ ನೀರು ನುಗ್ಗಿ ಕೆಲವು ಸ್ಥಳಗಳಲ್ಲಿ ಧಕ್ಕೆಯಾಗಿರುವ ಲೈನಿಂಗ್ ಅನ್ನೂ ಸಹ ಗುತ್ತಿಗೆದಾರರಿಂದಲೇ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ ದುರಸ್ತಿ ಮಾಡಿಸಿಕೊಳ್ಳಲಾಗುತ್ತಿದೆ.

ಆ) ಮೇಲಿನಂತೆ ಕ್ರಮ ತೆಗೆದುಕೊಳ್ಳುತ್ತಿರುವುದರಿಂದ ಸರ್ಕಾರದ ಹಣ ಪೋಲಾಗುತ್ತಿರುವ ಪ್ರಸಂಗ ಉದ್ಭವಿಸುವುದಿಲ್ಲ.

ಎಂ.ಪಿ.ಎಂ. ಅಭಿವೃದ್ಧಿ ಅನುದಾನ

788(1065) ಶ್ರೀ ಬಿ.ಕೆ. ಸಂಗಮೇಶ್ವರ (ಭದ್ರಾವತಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಮೈಸೂರು ಕಾಗದ ಕಾರ್ಖಾನೆಯನ್ನು ಆಧುನೀಕರಣ ಮಾಡದೆಯೇ ಸುಮಾರು 2 ವರ್ಷಕ್ಕೆ 170 ಕೋಟಿ ನಷ್ಟ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಇದಕ್ಕೆ ಯಾರು ಹೊಣೆಗಾರರಾಗಿದ್ದಾರೆ ;

ಇ) ಕಾರ್ಖಾನೆಯನ್ನು ಆಧುನೀಕರಣಗೊಳಿಸಿ ನಷ್ಟವನ್ನು ತಪ್ಪಿಸಲು ಸಾಧ್ಯವಿಲ್ಲವೇ ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬಂದಿದೆ.

ಆ) ಎಂಪಿಎಂ ನಷ್ಟವನ್ನು ಈ ಕೆಳಗಿನ ಕೆಲವು ಕಾರಣಗಳಿಂದಾಗಿ ಅನುಭವಿಸುತ್ತಿದೆ. ಇದಕ್ಕೆ ಯಾವುದೇ ವ್ಯಕ್ತಿ/ವ್ಯಕ್ತಿಗಳನ್ನು ಹೊಣೆ ಆಗಿಸುವುದು ಸಾಧ್ಯವಿಲ್ಲ :

1) ಲಾಭಾಂಶ ಹೆಚ್ಚಿರುವ ಲಿಖಿತ ಮತ್ತು ಮುದ್ರಣ ಕಾಗದದ ಉತ್ಪಾದನೆಯ ಸೀಮಿತ ಉತ್ಪಾದನಾ ಕ್ಷಮತೆ (30,000 ಮೆ.ಟನ್ನುಗಳು).

2) ನ್ಯೂಸ್‌ಪ್ರಿಂಟ್‌ನ ಉತ್ಪಾದನೆಯ ಮೇಲೆ ಬಹಳವಾಗಿ ನಿರ್ಭರವಾಗಿರುವಿಕೆ (75,000 ಮೆ.ಟನ್ನುಗಳು) ಆಮದು ಮಾಡಿಕೊಳ್ಳಲಾದ ನ್ಯೂಸ್‌ಪ್ರಿಂಟ್‌ನ ಪರಿಮಾಣ ಬಹಳವಾಗಿ ಹೆಚ್ಚಾದುದರಿಂದ ಮಾರುಕಟ್ಟೆಯ ದರದಲ್ಲಿ ಉಂಟಾದ ಬೆಳೆ ಕುಸಿತ.

3) ಹಳತಾದ ಯಂತ್ರಗಳು ಮತ್ತು ತಂತ್ರಜ್ಞಾನದಿಂದಾದ ಹೆಚ್ಚು ಉತ್ಪಾದನಾ ವೆಚ್ಚ (ಯಂತ್ರಗಳ ಸರಾಸರಿ ಆಯಸ್ಸು 69 ವರ್ಷಗಳಿಂದ 29 ವರ್ಷಗಳಾಗಿದೆ).

4) ಹೆಚ್ಚಿನ ಕಬ್ಬಿನ ಬೆಲೆ, ಕುಂಠಿತವಾದ ಸಕ್ಕರೆ ಇಳುವರಿ ಮತ್ತು ಸಕ್ಕರೆ ದರದಲ್ಲಿ ಇಳಿತ.

5) ನೌಕರರ ಸಂಬಳದ ಹೊರೆ (ಕೈಗಾರಿಕಾ ಸರಾಸರಿ ಮಾರಾಟದ ಶೇ.10ಕ್ಕೆ ವಿರುದ್ಧವಾಗಿ ಎಂಪಿಎಂನ ಸಂಬಳ, ಮಾರಾಟದ ಶೇ.25ರಷ್ಟಿದೆ.)

6) ಹೆಚ್ಚಿದ ವಿದ್ಯುಚ್ಛಕ್ತಿ ಖರ್ಚು (ಕೆಪಿಟಿಸಿಎಲ್‌ನಿಂದ ಖರೀದಿಸಿದ ರೂ.25 ಕೋಟಿಗಳ ವಾರ್ಷಿಕ ರೂ.10 ರಿಂದ 12 ಕೋಟಿಗಳಷ್ಟು ಹೆಚ್ಚಾಗಿದೆ) ಕೈಗಾರಿಕಾ ಸರಾಸರಿಯಾದ ಶೇ.19ರ ವಿರುದ್ಧವಾಗಿ ವಿದ್ಯುತ್ ಮತ್ತು ಉರುವಲ ಖರ್ಚು ಉತ್ಪಾದನಾ ವೆಚ್ಚದ ಶೇ. 24 ರಷ್ಟಿದೆ.

ಇ) ಮೇಲೆ ತಿಳಿಸಿದ ಆಧುನೀಕರಣ ಪ್ರಸ್ತಾಪಗಳಿಗೆಂದು, ಕಂಪನಿಗೆ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ನೆರವಾಗುವಂತೆ ಸರ್ಕಾರವು ರೂ.100-00 ಕೋಟಿಗಳ ಗ್ಯಾರಂಟಿಯನ್ನು ಒದಗಿಸಿದೆ. ಕಂಪನಿಯು

ಇದಕ್ಕಾಗಿ ರೂ.50–00 ಕೋಟಿಗಳ ಬಾಂಡ್‌ಗಳನ್ನು ಇಷ್ಯೂ ಮಾಡುವ ಮೂಲಕ ಈಗಾಗಲೇ ಒಟ್ಟುಗೂಡಿಸಿದೆ. ಆದರೆ, ಕಂಪನಿಯ ಆರ್ಥಿಕ ಮುಗ್ಗಟ್ಟಿನಿಂದಾಗಿ, ರೋಟರಿ ಲೈಮ್ ಕಿಲ್ನ್ ಯೋಜನೆ ಮತ್ತು ಕೋ–ಜನರೇಷನ್ ಯೋಜನೆಗಳ ಬಂಡವಾಳ ವೆಚ್ಚಕ್ಕಾಗಿ ಒಟ್ಟುಗೂಡಿಸಿದ ಕ್ರಮವಾಗಿ ರೂ.35–00 ಕೋಟಿಗಳನ್ನು ಮತ್ತು ರೂ.10–00 ಕೋಟಿಗಳನ್ನು ಈಗಾಗಲೇ ಕಾರ್ಯಕಾರಿ ಬಂಡವಾಳದ ಅಗತ್ಯತೆಗಾಗಿ ಈಗಾಗಲೇ ಬಳಸಿಕೊಳ್ಳಲಾಗಿದೆ.

ದಿನಾಂಕ : 31–3–2011ರ ವೇಳೆಗೆ ಕಂಪನಿಯ ಸಂಚಿತ ನಷ್ಟವು ರೂ.200–00 ಕೋಟಿಗಳನ್ನು ಮೀರಿರುವ ನಿರೀಕ್ಷೆಯಿಂದಾಗಿ ಕಂಪನಿಯ ನಿವ್ವಳ ಆಸ್ತಿಯು ಋಣಾತ್ಮಕ ಆಗಿದ್ದು, ಕಂಪನಿಯ ಅಸ್ವಸ್ಥ ಕಂಪನಿ ಆಗಿದೆ. ಈ ಕಾರಣವಾಗಿ ಬಂಡವಾಳ ವೆಚ್ಚ ಹಾಗೂ ಕಾರ್ಯಕಾರಿ ಬಂಡವಾಳಕ್ಕಾಗಿ ಹೆಚ್ಚುವರಿ ಸಂಪನ್ಮೂಲಗಳನ್ನು ಒಟ್ಟುಗೂಡಿಸುವುದು ಅತ್ಯಂತ ಕಷ್ಟವಾಗಿದ್ದು, ಇದು ಕಂಪನಿಯ ಆಧುನೀಕರಣ ಯೋಜನೆಗಳು ಮತ್ತು ದೈನಂದಿನ ಚಟುವಟಿಕೆಗಳ ಮೇಲೂ ಅಹಿತಕರ ಪ್ರಭಾವ ಬೀರುತ್ತಿದೆ. ಕಂಪನಿಯ ಪುನಃಶ್ಚೇತನಕ್ಕಾಗಿ ಕಂಪನಿಗೆ ಬಂಡವಾಳ ವೆಚ್ಚ ಹಾಗೂ ಕಾರ್ಯಕಾರಿ ಬಂಡವಾಳಗಳನ್ನು ಒದಗಿಸುವ ಪ್ರಸ್ತಾಪಗಳು ಸರ್ಕಾರದ ಸಕ್ರಿಯ ಪರಿಗಣನೆಯಲ್ಲಿದೆ.

ಎಂ.ಪಿ.ಎಂ. ಅಧ್ಯಕ್ಷರ ಬದಲಾವಣೆ ಮತ್ತು ಕಾರ್ಮಿಕರಿಗೆ ಡಿ.ಎ. ನೀಡುವುದು

789(1066) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಹೊಸದಾಗಿ ನೇಮಕಗೊಂಡಿರುವ ಎಂ.ಪಿ.ಎಂ. ಅಧ್ಯಕ್ಷರ ನಿರ್ಲಕ್ಷ್ಯದಿಂದಾಗಿ ಕಾರ್ಖಾನೆ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಾರ್ಮಿಕರಿಗೆ ಸಂವಿಧಾನಾತ್ಮಕವಾಗಿ ಲೇಬರ್ ಆಕ್ಟ್ ಪ್ರಕಾರ ತುಟ್ಟಿಭತ್ಯೆಯನ್ನು ನೀಡಬೇಕಾಗಿದ್ದು, 8 ತಿಂಗಳಾದರೂ ನೀಡದಿರುವ ಬಗ್ಗೆ ಸರ್ಕಾರವು ಕ್ರಮ ಕೈಗೊಂಡಿದೆಯೇ ?